ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES, BANGALORE
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು
ICAR - KRISHI VIGYAN KENDRA, KONEHALLI, TIPTUR TQ, TUMAKURU

# ಕಲ್ಪವೃಕ್ಷ

## e - NEWS LETTER /ಇ –ವಾರ್ತಾ ಪತ್ರಿಕೆ

ಸಂಪುಟ: 17 | ಅಕ್ಟೋಬರ್ – ಡಿಸೆಂಬರ್ 2025 | ಸಂಚಿಕೆ : 4

## ವಿಶ್ವ ಆಹಾರ ದಿನಾಚರಣೆ – 2025

ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ತಿಪಟೂರು, ತುಮಕೂರು ವತಿಯಿಂದ "ವಿಶ್ವ ಆಹಾರ ದಿನ 2025" ಕಾರ್ಯಕ್ರಮವನ್ನು ತಿಪಟೂರು ನಗರ ಪುರಸಭೆಯ ಕಚೇರಿಯಲ್ಲಿ ದಿನಾಂಕ : 16/10/2025 ರಂದು ಈ ವರ್ಷದ "ಉತ್ತಮ ಆಹಾರ ಮತ್ತು ಉತ್ತಮ ಭವಿಷ್ಯಕ್ಕಾಗಿ ಕೈಜೋಡಿಸಿ" ಎಂಬ ಧ್ಯೇಯವಾಕ್ಯದೊಂದಿಗೆ ಆಯೋಜಿಸಲಾಗಿತ್ತು.




ತಿಪಟೂರು ಕ್ಷೇತ್ರದ ಗೌರವಾನ್ವಿತ ಶಾಸಕರಾದ ಶ್ರೀ ಕೆ. ಷಡಕ್ಷರಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಆಹಾರವು ಮಾನವ ಜೀವನದ ಮೂಲಭೂತ ಅವಶ್ಯಕತೆಯಾಗಿದೆ, ರೈತರು ಆಹಾರ ಉತ್ಪಾದನೆಯ ಬೆನ್ನೆಲುಬಾಗಿರುವಂತೆಯೇ, ನೈರ್ಮಲ್ಯ ಕಾರ್ಮಿಕರು ನಗರ ಸ್ವಚ್ಛತೆಯ ಬೆನ್ನೆಲುಬಾಗಿದ್ದಾರೆ. ಈ ರೀತಿಯ ಕಾರ್ಯಕ್ರಮಗಳು ಪೌರಕಾರ್ಮಿಕರಲ್ಲಿ ಪೌಷ್ಟಿಕ ಆಹಾರವನ್ನು ಸೇವಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತವೆ ಎಂದು ಮಾತನಾಡಿದರು. ತಿಪಟೂರು ಪುರಸಭೆಯ ಅಧ್ಯಕ್ಷೆ ಶ್ರೀಮತಿ ಮೇಘಶ್ರೀ ಭೂಷಣ್‌ರವರು, ಆಹಾರ ಭದ್ರತೆ, ಉತ್ತಮ ಪೋಷಣೆ ಮತ್ತು ಶೂನ್ಯ ಹಸಿವಿನ ಗುರಿಯನ್ನು ಸಾಧಿಸಲು ರೈತರಿಂದ ಗ್ರಾಹಕರವರೆಗೆ ಎಲ್ಲರ ಭಾಗವಹಿಸುವಿಕೆಯ ಅಗತ್ಯವಿದೆ ಎಂದು ವಿವರಿಸಿದರು. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ವೈ.ಎನ್. ಶಿವಲಿಂಗಯ್ಯ ಅವರು ಅಪೌಷ್ಟಿಕತೆ ಮತ್ತು ಹಸಿವು ಪ್ರಮುಖ ಸಮಸ್ಯೆಗಳಾಗಿ ಉಳಿದಿವೆ ಎಂದು ಹೇಳಿದರು. ಆಹಾರದಲ್ಲಿ ಸಾಕಷ್ಟು ಪೋಷಕಾಂಶಗಳ ಕೊರತೆಯು ಮಕ್ಕಳ ಬೆಳವಣಿಗೆ, ತೂಕ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಹಣ್ಣುಗಳು, ತರಕಾರಿಗಳು ಮತ್ತು ಧಾನ್ಯಗಳನ್ನು ಸೇವಿಸುವುದರಿಂದ ಆರೋಗ್ಯ ಸುಧಾರಿಸಬಹುದು. ಮಧುಮೇಹ ಪ್ರಕರಣಗಳಲ್ಲಿ ಭಾರತವು ಪ್ರಮುಖ ದೇಶಗಳಲ್ಲಿ ಸ್ಥಾನ ಪಡೆದಿದೆ ಎಂದು ಅವರು ಮತ್ತಷ್ಟು ಉಲ್ಲೇಖಿಸಿದರು. ದೈನಂದಿನ ಊಟದಲ್ಲಿ ಫೈಬರ್ ಭರಿತ ಎಲೆ ತರಕಾರಿಗಳು ಮತ್ತು ತರಕಾರಿಗಳನ್ನು ಸೇರಿಸುವುದರಿಂದ ಮಧುಮೇಹವನ್ನು ನಿಯಂತ್ರಿಸಲು ಸಹಾಯವಾಗುತ್ತದೆ. ಹಸಿವು ಭೂಮಿಯ ಮೇಲಿನ ಜೀವನದ ದೊಡ್ಡ ಶತ್ರು; ಹಸಿವನ್ನು ನಿರ್ಮೂಲನೆ ಮಾಡಲು, ಆಹಾರ ಅತ್ಯಗತ್ಯ. ಆಹಾರದ ಪ್ರಾಮುಖ್ಯತೆ ಮತ್ತು ಹಸಿವಿನ ಜಾಗತಿಕ ಸಮಸ್ಯೆಯನ್ನು ಎತ್ತಿ ತೋರಿಸುವ ವಿವಿಧ ವಿಷಯಗಳೊಂದಿಗೆ ಪ್ರತಿ ವರ್ಷ ವಿಶ್ವ ಆಹಾರ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕೆ.ವಿ.ಕೆ.ಯ ಗೃಹ ವಿಜ್ಞಾನಿಯಾದ ಬಿ.ಆರ್. ಗಾನವಿ ರವರು ವೈಯಕ್ತಿಕ ಮತ್ತು ಆಹಾರ ನೈರ್ಮಲ್ಯ, ಸಮತೋಲಿತ ಆಹಾರ, ಆಹಾರ ಸುರಕ್ಷತೆ ಮತ್ತು ಆರೋಗ್ಯಕರ ಆಹಾರ ಪದ್ಧತಿಗಳ ಬಗ್ಗೆ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಕೆ.ವಿ.ಕೆ.ಯ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಎಂ. ಹೆಚ್. ಶಂಕರ, ವಿಜ್ಞಾನಿಗಳಾದ ಡಾ. ಮನೋಜ್, ಡಾ. ದರ್ಶನ್, ಪುರಸಭೆಯ ಅಧಿಕಾರಿಗಳು, ಪೌರಕಾರ್ಮಿಕರು ಮತ್ತು ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

# ತಿಪಟೂರಿನಲ್ಲಿ ಪ್ರಧಾನ ಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯ ನೇರ ಪ್ರಸಾರ



ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ತಿಪಟೂರು, ತುಮಕೂರು, ಕೃಷಿ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ, ದ್ವಿದಳ ಧಾನ್ಯಗಳಲ್ಲಿ ಪ್ರಧಾನ ಮಂತ್ರಿ ಧನ ಧಾನ್ಯ ಕೃಷಿ ಯೋಜನೆ ಮತ್ತು ಆತ್ಮನಿರ್ಭರತ ಅಭಿಯಾನದ ಉದ್ಘಾಟನೆಯ ಕುರಿತು ಗೌರವಾನ್ವಿತ ಪ್ರಧಾನ ಮಂತ್ರಿಗಳ ಕಾರ್ಯಕ್ರಮದ ನೇರ ಪ್ರಸಾರವನ್ನು ಅಕ್ಟೋಬರ್ 11, 2025 ರಂದು ತಿಪಟೂರಿನ ಗುರುಕುಲಾನಂದ ಆಶ್ರಮದಲ್ಲಿ ಆಯೋಜಿಸಲಾಗಿತ್ತು.

ತಿಪಟೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ, ಗೌರವಾನ್ವಿತ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ತಮ್ಮ ಭಾಷಣದಲ್ಲಿ, ಭಾರತೀಯ ಕೃಷಿಗೆ ಹೊಸ ಯುಗವನ್ನು ರೂಪಿಸುವಲ್ಲಿ ಗೌರವಾನ್ವಿತ ಪ್ರಧಾನ ಮಂತ್ರಿಯವರ ದೂರದೃಷ್ಟಿಯ ನಾಯಕತ್ವವನ್ನು ಅವರು ಶ್ಲಾಘಿಸಿದರು. ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಮತ್ತು ಸಿರಾ ವಿಧಾನಸಭೆಯ ಶಾಸಕರಾದ ಶ್ರೀ ಟಿ.ಬಿ. ಜಯಚಂದ್ರ, ತಾಂತ್ರಿಕ ಪ್ರಗತಿಯನ್ನು ರೈತರಿಗೆ ಹತ್ತಿರ ತರುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದ ಪ್ರಯತ್ನಗಳನ್ನು ಶ್ಲಾಘಿಸಿದರು. ಈ ಕಾರ್ಯಕ್ರಮವು ತಿಪಟೂರಿನ ಗುರುಕುಲಾನಂದ ಆಶ್ರಮದ ಶ್ರೀ ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮೀಜಿಯವರ ದಿವ್ಯ ಸಾನಿಧ್ಯದಿಂದ ಅದ್ಧೂರಿಯಾಗಿ ನೆರವೇರಿತು. ಅವರು ತಮ್ಮ ಆಶೀರ್ವಾದದಿಂದ ಸಭೆಗೆ ಸ್ಫೂರ್ತಿ ನೀಡಿದರು ಮತ್ತು ಸುಸ್ಥಿರ ಸಮೃದ್ಧಿಗಾಗಿ ಕೃಷಿಯಲ್ಲಿ ನೈತಿಕ ಮತ್ತು ಪರಿಸರ ಸಾಮರಸ್ಯದ ಮಹತ್ವವನ್ನು ಒತ್ತಿ ಹೇಳಿದರು.

ತಿಪಟೂರಿನ ಗೌರವಾನ್ವಿತ ಶಾಸಕರಾದ ಶ್ರೀ ಎಸ್. ಷಡಾಕ್ಷರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು ಮತ್ತು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವೈಜ್ಞಾನಿಕ ಆವಿಷ್ಕಾರಗಳು ಮತ್ತು ಕ್ಷೇತ್ರ ಮಟ್ಟದ ಅನ್ವಯಿಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಐಸಿಎಆರ್–ಕೆವಿಕೆ, ತಿಪಟೂರು ಮತ್ತು ಕೃಷಿ ಇಲಾಖೆಗಳ ಪ್ರಯತ್ನಗಳನ್ನು ಶ್ಲಾಘಿಸಿದರು. ಉತ್ಪಾದಕತೆ ಮತ್ತು ಆದಾಯವನ್ನು ಹೆಚ್ಚಿಸಲು ಸರ್ಕಾರಿ ಯೋಜನೆಗಳು ಮತ್ತು ಕೆವಿಕೆ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಳ್ಳುವಂತೆ ಅವರು ರೈತರನ್ನು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಜ್ಯೋತಿ ಗಣೇಶ್, ಮುಖಂಡರಾದ ಶ್ರೀ ಕೃಷ್ಣಪ್ಪ, ಶ್ರೀ ರವಿ ಹೆಬ್ಬಾಕ, ಶ್ರೀ ಶಾಂತಕುಮಾರ್, ಶ್ರೀಮತಿ ಸೇರಿದಂತೆ ಗಣ್ಯರು ಹಾಗೂ ಮೇಘನಾ ಭೂಷಣ್, ಡಾ. ವೈ. ಎನ್. ಶಿವಲಿಂಗಯ್ಯ, ಡಾ. ಎಂ. ಜೆ. ಚಂದ್ರೇಗೌಡ, ಡಾ. ಶಂಕರ ಎಂ. ಎಚ್., ಚುನಾಯಿತ ಪ್ರತಿನಿಧಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯಾದ್ಯಂತ 1,478 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಸ್ಯ ಸಂತೆ – 2025: ರೈತರ ಸಮೃದ್ಧಿಯತ್ತ ಒಂದು ಹಸಿರು ಹೆಜ್ಜೆ

ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ ತಿಪಟೂರು, ತುಮಕೂರು "ರೈತರ ಸಮೃದ್ಧಿಗೆ ಹಸಿರು ಹೆಜ್ಜೆ" (ರೈತರ ಸಮೃದ್ಧಿಯತ್ತ ಒಂದು ಹಸಿರು ಹೆಜ್ಜೆ) ಎಂಬ ಸ್ಫೂರ್ತಿದಾಯಕ ವಿಷಯದ ಅಡಿಯಲ್ಲಿ ಎರಡು ದಿನಗಳ ಸಸ್ಯ ಸಂತೆ – 2025 ಅನ್ನು ಯಶಸ್ವಿಯಾಗಿ ದಿನಾಂಕ 27/10/2025 ರಿಂದ 28/10/2025 ರವರಗೆ ಆಯೋಜಿಸಿತು. ಈ ಕಾರ್ಯಕ್ರಮವು ರೈತರು, ಉದ್ಯಮಿಗಳು ಮತ್ತು ಕೃಷಿ–ನವೋದ್ಯಮಗಳು ತೋಟಗಾರಿಕೆ ಮತ್ತು ಸಂಬಂಧಿತ ವಲಯಗಳಲ್ಲಿ ನವೀನ ತಂತ್ರಜ್ಞಾನಗಳು, ಮಾರುಕಟ್ಟೆ ಸಂಪರ್ಕಗಳು ಮತ್ತು ಸುಸ್ಥಿರ ಅಭ್ಯಾಸಗಳನ್ನು ಅನ್ವೇಷಿಸಲು ಒಂದು ವೇದಿಕೆಯಾಗಿ ಕಾರ್ಯನಿರ್ವಹಿಸಿತು.





ಸಸ್ಯ ಸಂತೆಯ ಮುಖ್ಯ ಉದ್ದೇಶವೆಂದರೆ ತೋಟಗಾರಿಕಾ ಉದ್ಯಮಶೀಲತೆ, ಮೌಲ್ಯವರ್ಧನೆ ಮತ್ತು ತಂತ್ರಜ್ಞಾನ ಅಳವಡಿಕೆಯನ್ನು ಉತ್ತೇಜಿಸುವುದು ಮತ್ತು ರೈತರು ಹೆಚ್ಚಿನ ಮೌಲ್ಯದ ಬೆಳೆಗಳಲ್ಲಿ ವೈವಿಧ್ಯಗೊಳಿಸಲು ಮತ್ತು ಸುಸ್ಥಿರ, ಪರಿಸರ ಸ್ನೇಹಿ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು. ಇದು ರೈತರು ಮತ್ತು ತಂತ್ರಜ್ಞಾನ ಪೂರೈಕೆದಾರರ ನಡುವೆ ಸೇತುವೆಯನ್ನು ರಚಿಸುವುದು, ಸರ್ಕಾರಿ ಯೋಜನೆಗಳು, ಸುಧಾರಿತ ಪ್ರಭೇದಗಳು ಮತ್ತು ಸಂಪನ್ಮೂಲ–ಸಮರ್ಥ ಉತ್ಪಾದನಾ ವ್ಯವಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ವೈ.ಎನ್. ಶಿವಲಿಂಗಯ್ಯರವರು ಸಸ್ಯ ಸಂತೆಯನ್ನು ಉದ್ಘಾಟಿಸಿದರು, ಅವರು ರೈತರ ಆದಾಯ, ಪೌಷ್ಟಿಕಾಂಶ ಸುರಕ್ಷತೆ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವಲ್ಲಿ ತೋಟಗಾರಿಕೆಯ ನಿರ್ಣಾಯಕ ಪಾತ್ರವನ್ನು ಹೇಳಿದರು. ಕೌಶಲ್ಯ ಅಭಿವೃದ್ಧಿ ಮತ್ತು ತಂತ್ರಜ್ಞಾನ ಪ್ರಸರಣದ ಮೂಲಕ ರೈತರನ್ನು ಸಬಲೀಕರಣಗೊಳಿಸುವಲ್ಲಿ ಕೆವಿಕೆ ತಿಪಟೂರಿನ ನಿರಂತರ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

ತಾಲ್ಲೂಕು ಕೃಷಿ ಸಮಾಜದ ಅಧ್ಯಕ್ಷರಾದ ಶ್ರೀ ಯೋಗೀಶ್, ತೋಟಗಾರಿಕೆ ಅಭಿವೃದ್ಧಿ ಮತ್ತು ಗ್ರಾಮೀಣ ಉದ್ಯಮಶೀಲತೆಯನ್ನು ಬಲಪಡಿಸುವಲ್ಲಿ ರೈತ ಸಮೂಹಗಳು, ಸ್ಥಳೀಯ ನಾಯಕತ್ವ ಮತ್ತು ಸಾಂಸ್ಥಿಕ ಒಮ್ಮುಖದ ಮಹತ್ವವನ್ನು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಿಪಟೂರಿನ ಮತ್ತಿಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಜ್ಯೋತಿ ವಹಿಸಿದ್ದರು ಹಾಗೂ ಸಸ್ಯ ಸಂತೆಯ ಸಮಾರೋಪ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆಯ ಪ್ರಧಾನ ವಿಜ್ಞಾನಿಗಳು ಹಾಗೂ ನೋಡಲ್ ಅಧಿಕಾರಿಗಳಾದ ಡಾ. ಎಮ್.ಜೆ. ಚಂದ್ರೇಗೌಡರವರು ಭಾಗವಹಿಸಿದ್ದರು

## ಹೆಚ್ಚಿನ ಇಳುವರಿ ಮತ್ತು ಬ್ಯಾಕ್ಟೀರಿಯಾ  ಸೊರಗು ರೋಗ ನಿರೋಧಕತೆಗಾಗಿ ಬದನೆಕಾಯಿಯಲ್ಲಿ ಕಸಿ ತಂತ್ರಜ್ಞಾನದ ಕ್ಷೇತ್ರೋತ್ಸವ



ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ತಿಪಟೂರು, ತುಮಕೂರು ತಿಪಟೂರು ತಾಲ್ಲೂಕಿನ ಬಿದರೆಗುಡಿ ಗ್ರಾಮದಲ್ಲಿ ಹೆಚ್ಚಿನ ಇಳುವರಿ ಮತ್ತು ಬ್ಯಾಕ್ಟೀರಿಯಾ ಸೊರಗು ರೋಗ ನಿರೋಧಕತೆಗಾಗಿ ಬದನೆಕಾಯಿಯಲ್ಲಿ ಕಸಿ ತಂತ್ರಜ್ಞಾನದ ಕ್ಷೇತ್ರೋತ್ಸವವನ್ನು ದಿನಾಂಕ 26/11/2025 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ವೈ.ಎನ್. ಶಿವಲಿಂಗಯ್ಯರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸಲು ನವೀನ ತಂತ್ರಜ್ಞಾನಗಳು ಮತ್ತು ಸುಧಾರಿತ ಪ್ರಭೇದಗಳನ್ನು ಅಳವಡಿಸಿಕೊಳ್ಳುವ ಮಹತ್ವವನ್ನು ತಿಳಿಸಿದರು. ಯುಎಎಸ್ ಬೆಂಗಳೂರು ಬಿಡುಗಡೆ ಮಾಡಿದ ಸುಧಾರಿತ ಪ್ರಭೇದಗಳು ಮತ್ತು ತಂತ್ರಜ್ಞಾನಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಿದರು.

**ಡಾ. ಶಂಕರ್, ಎಂ.ಎಚ್. ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು** ಎಫ್‌ಎಲ್‌ಡಿ, ಕ್ಷೇತ್ರೋತ್ಸವ ಮತ್ತು ಇತರ ಕೆವಿಕೆ ಚಟುವಟಿಕೆಗಳ ಮಹತ್ವದ ಬಗ್ಗೆ ವಿವರಿಸಿದರು. ಹೆಚ್ಚಿನ ಗಳಿಕೆಗಾಗಿ ತೋಟಗಾರಿಕೆ ಬೆಳೆಗಳ ಮಹತ್ವದ ಬಗ್ಗೆಯೂ ಅವರು ವಿವರಿಸಿದರು.

**ಡಾ. ಕೀರ್ತಿಶಂಕರ್ ಕೆ., ವಿಜ್ಞಾನಿ (ತೋಟಗಾರಿಕೆ)** ಬದನೆಕಾಯಿಯಲ್ಲಿ ಕಸಿ ತಂತ್ರಜ್ಞಾನದ ಪ್ರಯೋಜನಗಳು, ಅದರ ಉತ್ಪಾದನೆ ಮತ್ತು ರೋಗ ನಿರೋಧಕತೆಯ ಬಗ್ಗೆ ವಿವರಿಸಿದರು. ಇಳುವರಿ ಮತ್ತು ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಲು ತರಕಾರಿ ಬೆಳೆಗಳಲ್ಲಿ ಕಸಿ ಮಾಡುವ ವಿಧಾನದ ಬಗ್ಗೆಯೂ ಅವರು ವಿವರಿಸಿದರು.

**ಶ್ರೀ ಮೋಹನ್ ಫಲಾನುಭವಿ ರೈತರು** ಬದನೆಕಾಯಿಯಲ್ಲಿ ಕಸಿ ತಂತ್ರಜ್ಞಾನದ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ತಿಪಟೂರಿನ ಕೆವಿಕೆ ವಿಜ್ಞಾನಿಗಳು ಮತ್ತು 50 ಕ್ಕೂ ಹೆಚ್ಚು ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿದ್ದರು.

## ವಿಶ್ವ ಮಣ್ಣು ದಿನಾಚರಣೆ



ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ. ಕೃಷಿ ಇಲಾಖೆ, ತಿಪಟೂರು, ತೋಟಗಾರಿಕೆ ಇಲಾಖೆ, ತಿಪಟೂರು, ಪರದೀಪ್ ಪಾಸ್ಫೇಟ್ ಲಿಮಿಟೆಡ್, ತುಮಕೂರು ಹಾಗೂ ಜೆ ಫಾರ್ಮಾ ಸರ್ವೀಸಸ್, ತುಮಕೂರು ಜಿಲ್ಲೆ ಇವರಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಣ್ಣು ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 05–12–2025 ರಂದು ಆಚರಿಸಲಾಯಿತು.

ಕಾರ್ಯಕ್ರಮವನ್ನು ಶ್ರೀ ಕೆ. ಷಡಕ್ಷರಿರವರು ಮಾನ್ಯ ಶಾಸಕರು, ತಿಪಟೂರು ವಿಧಾನಸಭಾ ಕ್ಷೇತ್ರ, ಇವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಎಂ.ಎಸ್. ಯೋಗೀಶ್ ಅಧ್ಯಕ್ಷರು, ತಾಲ್ಲೂಕು ಕೃಷಿಕ ಸಮಾಜ, ಶ್ರೀ ಮೋಹನ್ ಉಪಾಧ್ಯಕ್ಷರು, ಕೃಷಿಕ ಸಮಾಜ, ತಿಪಟೂರು, ಶ್ರೀ ಮಹೇಶ್, ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು, ಕೃಷಿ ಇಲಾಖೆ ಹಾಗೂ ಶ್ರೀ ಮಂಜು ಹೆಚ್.ಎಸ್., ತಾಂತ್ರಿಕ ಅಧಿಕಾರಿಗಳು, ತೋಟಗಾರಿಕೆ ಇಲಾಖೆ, ತಿಪಟೂರು ಇವರು ಉಪಸ್ಥಿತರಿದ್ದರು.

ಶ್ರೀ ಕೆ. ಷಡಕ್ಷರಿರವರು ಮಾನ್ಯ ಶಾಸಕರು, ತಿಪಟೂರು ವಿಧಾನಸಭಾ ಕ್ಷೇತ್ರ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಣ್ಣಿನ ಪ್ರಾಮುಖ್ಯತೆ ಬಗ್ಗೆ ತಿಳಿಸಿ ಥೈಲ್ಯಾಂಡ್ ದೇಶದ ರಾಜನಾದ ಭೂಮಿಭೋಲ್ ಅಡುಲ್ಯಾಡೇಜ್ ರವರ ಹುಟ್ಟು ಹಬ್ಬದ ನೆನಪಿಗಾಗಿ 2013ರಲ್ಲಿಯೇ ಅಂತಾರಾಷ್ಟ್ರೀಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಓ) ಒಪ್ಪಿ 2014ರಲ್ಲಿ ಪ್ರಥಮ ಜಾಗತಿಕ ಮಣ್ಣು ದಿನಾಚರಣೆ ಆಚರಿಸಲಾಯಿತು. ಮಣ್ಣಿನ ಉತ್ಪಾದಕತೆ ಕಡಿಮೆಯಾಗಲು ಮಣ್ಣಿನ ಮತ್ತು ನೀರಿನ ಗುಣಮಟ್ಟದ ಕುಸಿತವೆ ಕಾರಣ. ಆದ್ದರಿಂದ ರೈತಬಾಂದವರು ಶಿಫಾರಸ್ಸಿನ ಅನುಸಾರ ರಾಸಾಯನಿಕ ಗೊಬ್ಬರಗಳು, ಪೀಡೆನಾಶಕಗಳನ್ನು ಬಳಸಬೇಕು ಮತ್ತು ಸಾವಯವ ಕೃಷಿಗೆ ಹೆಚ್ಚು ಒತ್ತನ್ನು ನೀಡಬೇಕು ಎಂದು ತಿಳಿಸಿದರು

ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಡಾ. ತಸ್ಮಿಯಾ ಕೌಸರ್ ರವರು ತಮ್ಮ ಪ್ರಾಸ್ತಾವಿಕ ನುಡಿಗಳನ್ನಾಡಿ, ಆರೋಗ್ಯಯುತ ನಗರಗಳಿಗೆ ಆರೋಗ್ಯದಾಯಕ ಮಣ್ಣು ಎಂಬ ಘೋಷಣೆಯೊಂದಿಗೆ ಜಾಗತಿಕ ಮಣ್ಣಿನ ದಿನ ಎಂದು ಈ ವರುಷ ಡಿಸೆಂಬರ್ 5ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಈ ದಿನ ಸುಸ್ಥಿರ ಕೃಷಿ, ಆಹಾರದ ವ್ಯವಸ್ಥೆಗಳು, ಹವಾಮಾನ ವೈಪರಿತ್ಯ, ಜೀವ ವೈವಿದ್ಯ ಮತ್ತು ಮಾನವನ ಯೋಗಕ್ಷೇಮಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಶಂಕರ ಎಂ.ಹೆಚ್ ವಿಶ್ವ ಮಣ್ಣು ದಿನದ ಹಿನ್ನೆಲೆ, ಮಣ್ಣಿನ ಮಹತ್ವ ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು. ಶ್ರೀ ಎಂ.ಎಸ್ ಯೋಗೀಶ್ ರವರು ಮಣ್ಣಿನಲ್ಲಿ ಇಂಗಾಲವನ್ನು ಬಂದಿಸುವುದು ಮತ್ತು ಮಣ್ಣಿನ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು.

ಪಾರಾದೀಪ್ ಫಾಸ್ಫೇಟ್ಸ್ ಲಿಮಿಟೆಡ್ ಮುಖ್ಯ ವ್ಯವಸ್ಥಾಪಕರಾದ ಶಫಿ ಹೆಚ್.ಎಸ್ ರವರು ಮಾತನಾಡಿ ದೇಶದ ಎಲ್ಲಾ ಭಾಗದಲ್ಲೂ ನಮ್ಮ ಜೈ ಕಿಸಾನ್, ಪಾರಾದೀಪ್ ಪಾಸ್ಫೇಟ್, ಮಂಗಳ ಎಂಬ ಬ್ರಾಂಡಿನ ಜೈವಿಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ತಯಾರಿಸಿ ಒದಗಿಸುತ್ತದೆ. ಕೃಷಿಯಲ್ಲಿ ನ್ಯಾನೋ ಗೊಬ್ಬರದ ಬಳಕೆಯಿಂದ ಶೇ. 25 ರಷ್ಟು ರಾಸಾಯನಿಕ ಗೊಬ್ಬರದ ಬಳಕೆ ಕಡಿಮೆ ಮಾಡಿ ಹೆಚ್ಚು ಇಳುವರಿ ಪಡೆಯಬಹುದು, ಇತ್ತೀಚಿನ ದಿನಗಳಲ್ಲಿ ಕೇವಲ ಒಂದು ಅಥವಾ ಎರಡು ರೀತಿಯ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಹಲವು ಪೋಷಕಾಂಶಗಳ ಕೊರತೆ ಮಣ್ಣಿನಲ್ಲಿ ಉಂಟಾಗುತ್ತದೆ. ಆದ್ದರಿಂದ ಸಮತೋಲನ ಸಾವಯವ ಹಾಗೂ ರಾಸಾಯನಿಕ ಗೊಬ್ಬರದ ಬಳಕೆಯಿಂದ ಒಳ್ಳೆ ಇಳುವರಿಯನ್ನು ಪಡೆಯಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದಂತಹ ಡಾ. ದರ್ಶನ್. ಎಂ,ಈ ಶ್ರೀ ಮನೋಜ್ ಹೆಚ್., ಡಾ. ಗಾನವಿ, ಡಾ ಸತೀಶ್ ಹೆಚ್.ಎಸ್, ಶ್ರೀಮತಿ ರತಿ, ವಿಭಾ ಕೇಂದ್ರದ ಸಿಬ್ಬಂದಿಗಳು ಹಾಗೂ ಸುಮಾರು 125 ರೈತ ಭಾಂದವರು ಭಾಗವಹಿಸಿದ್ದರು.

## ತಡವಾದ ಮುಂಗಾರಿಗೆ ಸೂಕ್ತವಿರುವತಂಹ ರಾಗಿ ತಳಿ ಎಂ.ಎಲ್–322 ಕ್ಷೇತ್ರೋತ್ಸವ

ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬುಳ್ಳೇನಹಳ್ಳಿ ಗ್ರಾಮದಲ್ಲಿ ಶ್ರೀಯುತ ಶಿವಣ್ಣ ಎಂಬುವರ ತಾಕಿನಲ್ಲಿ ಪರಿಶಿಷ್ಠ ಪಂಗಡ ಉಪಯೋಜನೆ ಅಡಿಯಲ್ಲಿ ಬೆಳೆದ ರಾಗಿ ತಳಿ ಎಂ.ಎಲ್–322ರ ಬೆಳೆ ಕ್ಷೇತ್ರೋತ್ಸವವನ್ನು ದಿನಾಂಕ 10/12/2025 ರಂದು ಏಪರ್ಡಿಸಲಾಗಿತ್ತು.



ಕೃಷಿ ವಿಜ್ಞಾನ ಕೇಂದ್ರದ ಬೇಸಾಯಶಾಸ್ತ್ರ ವಿಜ್ಞಾನಿಯಾದ ಡಾ.ತಸ್ಮಿಯಾ ಕೌಸರ್ ಕಾರ್ಯಕ್ರಮದಲ್ಲಿ ಮಾತನಾಡಿ ರಾಗಿ ತಳಿ ಎಂ.ಆರ್–6 ಗೆ ಪರ್ಯಾಯವಾಗಿ ಅಭಿವೃದ್ಧಿಪಡಿಸಿದ ತಳಿ ಎಂ.ಎಲ್–322 ಆಗಿದು. ಈ ತಳಿಯು ಬೆಂಕಿ ರೋಗಕ್ಕೆ ನಿರೋಧಕತೆ, ನೆಲಕ್ಕೆ ಬಾಗದಿರುವ ತಳಿ ಹಾಗೂ ಭರ ಸಹಿಷ್ಣತೆ ಹೊಂದಿದೆ ಹಾಗೂ ಎಂ.ಎಲ್–322 ತಳಿಯು 110–115 ದಿನಗಳಲ್ಲಿ ಕಟಾವಿಗೆ ಬರುವುದು ಪ್ರತಿ ಎಕರೆಗೆ 12–14 ಕ್ವಿಂಟಲ್ ಕಾಳಿನ ಇಳುವರಿ ಹಾಗೂ 4–4.5 ಟನ್ ನಷ್ಟು ಹುಲ್ಲಿನ ಇಳುವರಿ ನೀಡುವ ಸಾಮರ್ಥ್ಯವನ್ನು ಹೊಂದಿದೆ ಹಾಗಾಗಿ ರೈತರು ಮುಂದಿನ ದಿನಗಳಲ್ಲಿ ಇಂತಹ ಒಳ್ಳೆಯ ಎಂ.ಎಲ್–322 ತಳಿಯನ್ನು ಹೆಚ್ಚು ಬೆಳೆಯಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ರೈತರಾದ ರಂಗನಾಥ್, ವೀರಭದ್ರ, ಕರಿಯಪ್ಪ ಮುಂತಾದವರು ಎಂ.ಎಲ್–322 ತಳಿಯ ಬಗ್ಗೆ ಅನುಭವವನ್ನು ಹಂಚಿಕೊಂಡರು ಅದೇ ಸಮಯದಲ್ಲಿ ರೈತರಾದ ವಿಜಯಲಕ್ಷ್ಮೀ ಈ ತಳಿಯ ಬಗ್ಗೆ ಮೆಚ್ಚುಗೆ ನೀಡಿದರು.ಈ ಕಾರ್ಯಕ್ರಮದಲ್ಲಿ 25ಕ್ಕೂ ಹೆಚ್ಚು ಹೊನ್ನೆಬಾಗಿ, ಬುಳ್ಳೇನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡು ಮಾಹಿತಿ ಪಡೆದರು.

## ಶೇಂಗಾ ಬೆಳೆಯ ಕ್ಷೇತ್ರೋತ್ಸವ



ಐ. ಸಿ. ಎ. ಆರ್– ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ವತಿಯಿಂದ ಶೇಂಗಾ ಬೆಳೆಯ ಕ್ಷೇತ್ರೋತ್ಸವವನ್ನು ಗುಬ್ಬಿ ತಾಲ್ಲೂಕಿನ ದಾಸಪ್ಪನಹಳ್ಳಿಯಲ್ಲಿ ದಿನಾಂಕ 30/10/2025 ರಂದು ಹಮ್ಮಿಕೊಳ್ಳಲಾಯಿತು.

ಕೇಂದ್ರದ ಬೇಸಾಯಶಾಸ್ತ್ರ ವಿಜ್ಞಾನಿ ಡಾ. ತಸ್ಮಿಯಾ ಕಾಸರ್ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಶೇಂಗಾ ಕದಿರಿ–6 ತಳಿಯು 95–100 ದಿನಕ್ಕೆ ಕಟಾವಿಗೆ ಬರುತ್ತದೆ. ತಳಿಯ ಇಳುವರಿಯು 8–10 ಕ್ವಿಂಟಾಲ್ ಪ್ರತಿ ಎಕರೆಗೆ ಬರುತ್ತದೆ. ಬಿತ್ತನೆ ಮಾಡುವ ಮುಂಚಿತವಾಗಿ ಶೇಂಗಾ ಬೀಜವನ್ನು ರೈಜೋಬಿಯಂ ಜಿವಾಣುವಿಂದ ಪ್ರತಿ ಕೆಜಿ ಬೀಜಕ್ಕೆ 20–25 ಗ್ರಾಂ ನಂತೆ ಬಿಜೋಪಚಾರ ಮಾಡಬೇಕು. ಬಿತ್ತನೆ ಸಮಯದಲ್ಲಿಯೇ ಎಕರೆಗೆ 2 ಚೀಲ ಡಿ.ಎ.ಪಿ ಗೊಬ್ಬರ, 5 ಕೆ.ಜಿ ಯೂರಿಯಾ ಹಾಗೂ 40 ಕೆ.ಜಿ ಪೊಟ್ಯಾಷ್ ಒದಗಿಸಬೇಕು ಬಿತ್ತನೆ ಮಾಡಿದ ದಿನ ಅಥವಾ ಮಾರನೆ ದಿನ ಪೆಂಡಿಮೇಥಲಿನ್ ಕಳೆನಾಶಕವು 1 ಮಿ. ಲೀ. ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಿಸಬೇಕು ತದನಂತರ ಬರುವಂತಹ ಕಳೆಗಳನ್ನು ಹತ್ತೋಟಿ ಮಾಡಲು ಬಿತ್ತನೆ ಮಾಡಿದ 20–25 ದಿವಸಕ್ಕೆ ಈಮ್ಯಾಜಿಥಪೈರ್ ಕಳೆನಾಶಕವು 2 ಮಿ. ಲೀ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿಕೊಂಡು ಸಿಂಪಡಿಸುವುದರಿಂದ ಸಂಪೂರ್ಣವಾಗಿ ಕಳೆಗಳನ್ನು ಹತ್ತೋಟಿ ಮಾಡಬಹುದು. ಶೇಂಗಾ ಬೆಳೆಯಲ್ಲಿ ಊಡು ಇಳು ಬಿಡುವ ಸಮಯದಲ್ಲಿ ಅಂದರೆ ಬಿತ್ತನೆ ಮಾಡಿದ 40–45 ದಿನಕ್ಕೆ ಜಿಪ್ಸಂ 100 ಕೆ.ಜಿ. ಈ ಪ್ರತಿ ಎಕರೆಗೆ ಒದಗಿಸುವದರಿಂದ ಒಳ್ಳೆಯ ಇಳುವರಿಯನ್ನು ಪಡೆಯಬಹುದು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ದಾಸಪ್ಪನಹಳ್ಳಿ ಗ್ರಾಮದ 30 ರೈತರು ಭಾಗವಹಿಸಿದ್ದರು.

# ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿಯ ಗಣಕೀಕೃತ ಜ್ಞಾನಭಂಡಾರ

ಕೃಷಿ ವಿಜ್ಞಾನ ಕೇಂದ್ರವು ಕೈಗೊಂಡಿರುವ ಎಲ್ಲಾ ಚಟುವಟಿಕೆಗಳ ಪಾರದರ್ಶಕತೆಯನ್ನು ನೀಡುವ ಸಲುವಾಗಿ ಸಾರ್ವಜನಿಕರ ವೀಕ್ಷಣೆಗೆ http://kvktumakuru.org/ ಜಾಲತಾಣವನ್ನು ಅನಾವರಣಗೊಳಿಸಿದೆ. ಈ ಜಾಲತಾಣದಲ್ಲಿ ಕೆ.ವಿ.ಕೆಯ ತ್ರೈಮಾಸಿಕ ವಾರ್ತಾ (ಕಲ್ಪವೃಕ್ಷ) ಪತ್ರಿಕೆ, ಕೆ.ವಿ.ಕೆ.ಯ ವಾರ್ಷಿಕ ವರದಿಗಳು, ಕೆ.ವಿ.ಕೆ.ಯ ಪ್ರಮುಖ




ಕಾರ್ಯಚಟುವಟಿಕೆಯಾದ ತಂತ್ರಜ್ಞಾನ ಮರುಪರಿಶೀಲನೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಈ.ಡಿ.ಪಿ ಮತ್ತು ಪೌಷ್ಠಿಕ ಕೈತೋಟದ ವರ್ಷವಾರು ಫಲಾನುಭವಿಗಳ ವಿವರ (ಡೇಟಾಬೇಸ್), ವರ್ಷವಾರು ಕೈಗೊಂಡ ತಂತ್ರಜ್ಞಾನ ಮರುಪರಿಶೀಲನೆಗಳು, ಮುಂಚೂಣಿ ಪ್ರಾತ್ಯಕ್ಷಿಕೆಗಳು, ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಈ.ಡಿ.ಪಿ ಮತ್ತು ಪೌಷ್ಠಿಕ ಕೈತೋಟ ತಾಂತ್ರಿಕತೆಯ ಸಂಪೂರ್ಣ ವಿವರ / ಡೇಟಾಬೇಸ್, ವರ್ಷವಾರು ಕೈಗೊಂಡ ಪ್ರಮುಖ ವಿಸ್ತರಣಾ ಚಟುವಟಿಕೆಗಳು ಮತ್ತು ಫಲಾನುಭವಿಗಳ ಸಂಪೂರ್ಣ ವಿವರ / ಡೇಟಾಬೇಸ್, ಕೆ.ವಿ.ಕೆ.ಯು ಪ್ರಾರಂಭಗೊಂಡಾಗಿನಿಂದ ಹುದ್ದೆವಾರು ಕಾರ್ಯನಿರ್ವಹಿಸಿದ ಸಿಬ್ಬಂದಿ ವಿವರ (ಡೇಟಾಬೇಸ್), ವರ್ಷವಾರು ಕೈಗೊಂಡ ಒಳಾವರಣ ತರಬೇತಿಗಳು, ಹೊರಾವರಣ ತರಬೇತಿಗಳು, ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಗಳು ಮತ್ತು ಪ್ರಾಯೋಜಿತ ತರಬೇತಿಗಳು ಮತ್ತು ಫಲಾನುಭವಿಗಳ ವಿವರ / ಡೇಟಾಬೇಸ್, ವಿಜ್ಞಾನಿವಾರು ಕೈಗೊಂಡ ಪ್ರಮುಖ ವಿಸ್ತರಣಾ ಚಟುವಟಿಕೆಗಳು ಮತ್ತು ಫಲಾನುಭವಿಗಳ ಸಂಪೂರ್ಣ ವಿವರ / ಡೇಟಾಬೇಸ್, ತಿಂಗಳುವಾರು ರೈತರಿಗೆ ಕಳುಹಿಸಿದ ಮೊಬೈಲ್ / ವಾಟ್ಸ್ ಆ್ಯಪ್ ಸಂದೇಶಗಳು ಮತ್ತು ಫಲಾನುಭವಿಗಳ ವಿವರ / ಡೇಟಾಬೇಸ್, ವರ್ಷವಾರು ಕೆ.ವಿ.ಕೆ.ಯ ಮಣ್ಣು ಮತ್ತು ನೀರು ಪ್ರಯೋಗಾಲಯದಲ್ಲಿ ಪರೀಕ್ಷಿಸಿದ ಮಣ್ಣು ಮತ್ತು ನೀರು ಮಾದರಿಗಳ ವಿವರ / ಡೇಟಾಬೇಸ್, ತಿಂಗಳುವಾರು / ವರ್ಷವಾರು ತುಮಕೂರು ಜಿಲ್ಲೆಯಲ್ಲಿ ಸುರಿದ ಮಳೆಯ ವಿವರಗಳ ಸಂಪೂರ್ಣ ಮಾಹಿತಿಯನ್ನು ಪಡೆಯಬಹುದಾಗಿದೆ. ಮುಂದುವರೆದು, ಕೆ.ವಿ.ಕೆ ಮತ್ತು ಅದರ ಧ್ಯೇಯೋದ್ದೇಶಗಳು, ಕೆ.ವಿ.ಕೆ.ಯಲ್ಲಿ ಪ್ರಸ್ಥುತವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವಿವರ, ಕೆ.ವಿ.ಕೆ.ಯಲ್ಲಿ ಲಭ್ಯವಿರುವ ಸೌಲಭ್ಯಗಳು, ರೈತರ ಯಶೋಗಾಥೆಯ ಕಿರು ವೀಡಿಯೋಗಳು, ಕೃಷಿಯಲ್ಲಿ ಹೊಸ ಅವಿಷ್ಕಾರ ಮಾಡಿರುವ ರೈತರ ವಿವರ, ಪ್ರಗತಿಪರ ರೈತರ ವಿವರ, ರೈತರಿಗೆ ಕೆ.ವಿ.ಕೆ. ಸಹಾಯವಾಣಿ ಸಂಖ್ಯೆ, ಕೆ.ವಿ.ಕೆ.ಯು ಕಳೆದ 5 ವರ್ಷಗಳಿಂದ ಕೈಗೊಂಡ ಪ್ರಮುಖ ಕಾರ್ಯಚಟುವಟಿಕೆಗಳಾದ – "ತಂತ್ರಜ್ಞಾನ ಮರುಪರಿಶೀಲನೆ, ಮುಂಚೂಣಿ ಪ್ರಾತ್ಯಕ್ಷಿಕೆಗಳು, ತರಬೇತಿ ಕಾರ್ಯಕ್ರಮಗಳು, ರೈತ ಕ್ಷೇತ್ರ ಪಾಠ ಶಾಲೆಗಳ" ಪಟ್ಟಿ, ಕೆ.ವಿ.ಕೆ.ಯು ಕೈಗೊಂಡ ಬಾಹ್ಯ ಅನುಧಾನ ಯೋಜನೆಗಳ ಮಾಹಿತಿ, ಕೆ.ವಿ.ಕೆ.ಯ ಸಂಪರ್ಕ ವಿಳಾಸ, ಕೆ.ವಿ.ಕೆ. ಕಛೇರಿಯ ಸಮಯದ ಮಾಹಿತಿ ಮತ್ತು ಕೃಷಿ ವಿಜ್ಞಾನ ಕೇಂದ್ರದ ಪ್ರಮುಖ ಚಟುವಟಿಕೆಗಳ ಛಾಯಾಚಿತ್ರಗಳ ಸಮೇತ ಮಾಹಿತಿಯನ್ನು ಪಡೆಯಬಹುದು. ಅಲ್ಲದೆ ಕೆ.ವಿ.ಕೆ.ಯ ಪ್ರಮುಖ ಚಟುವಟಿಕೆಗಳ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್‌ನಲ್ಲಿ ಹಂಚಿಕೊಳ್ಳುತ್ತಿದ್ದು ಸದರಿ ಸಾಮಾಜಿಕ ಜಾಲತಾಣಗಳಿಗೆ ಪ್ರವೇಶ ಪಡೆಯಲು ಜಾಲತಾಣದ ಕೊಂಡಿ / ಕ್ಯೂಆರ್ ಕೋಡ್ ಲಭ್ಯವಿದ್ದು, ಕ್ಯೂಆರ್ ಕೋಡ್ ಅನ್ನು ಸ್ಮಾರ್ಟ್ ಫೋನ್‌ನಿಂದ ಕ್ಯೂಆರ್ ಕೋಡ್ ರೀಡರ್ ಬಳಸಿ ಸ್ಕ್ಯಾನ್ ಮಾಡಿ ಮಾಹಿತಿಯನ್ನು ಪಡೆಯಬಹುದು. ಈ ಜಾಲತಾಣವನ್ನು ಕೆ.ವಿ.ಕೆ.ಯ ಗಣಕಯಂತ್ರ ಸಹಾಯಕರಾದ ಶ್ರೀ. ಪ್ರದೀಪ್ ಕುಮಾರ್ ಹೆಚ್. ರವರು ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿರುತ್ತಾರೆ.

ವೆಬ್‌ಸೈಟ್ http://kvktumakuru.org/img/nl/11.pdf

## ಕೆ.ವಿ.ಕೆ.ಯಿಂದ ಅಲಸಂದೆ ಬೆಳೆಯ ಕ್ಷೇತ್ರೋತ್ಸವ

ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ ಕೊನೇಹಳ್ಳಿ ವತಿಯಿಂದ ಭಾರತ ಸರ್ಕಾರದ ಪ್ರಾಯೋಜತ್ವದಲ್ಲಿ ಪರಿಶಿಷ್ಠ ಜಾತಿ ಉಪಯೋಜನೆ ಅಡಿಯಲ್ಲಿ ಅಲಸಂದೆ ಬೆಳೆಯ ಕ್ಷೇತ್ರೋತ್ಸವವನ್ನು ತುರುವೇಕೆರೆ ತಾಲ್ಲೂಕಿನ ಮೇಲಿನವಲಗೇರಿಹಳ್ಳಿಯಲ್ಲಿ ದಿನಾಂಕ 07/11/2025 ರಂದು ಹಮ್ಮಿಕೊಳ್ಳಲಾಗಿತ್ತು.




ಕೇಂದ್ರದ ಬೇಸಾಯಶಾಸ್ತ್ರ ವಿಜ್ಞಾನಿ ಡಾ. ತಸ್ಮಿಯಾ ಕೌಸರ್ ಮಾತನಾಡಿ ಅಲಸಂದೆಯ ಹೊಸ ತಳಿಯಾದಂತಹ ಕೆ.ಬಿ.ಸಿ. – 12 ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ ಬಿಡುಗಡೆ ಮಾಡಲಾಗಿದೆ. ತಳಿಯು 80–85 ದಿನಕ್ಕೆ ಕಟಾವಿಗೆ ಬರುತ್ತದೆ. ತಳಿಯ ಇಳುವರಿಯು ಎಕರೆಗೆ 5– 5.5 ಕ್ವಿಂಟಲ್ ಬರುತ್ತದೆ. ಬೀಜವು ಮಧ್ಯಮ ದಪ್ಪ ಮತ್ತು ತಿಳಿ ಕಂದು ಬಣ್ಣ ಹೊಂದಿರುತ್ತದೇ ತಳಿಯು ದುಂಡಾಣು ಎಲೆ ಅಂಗಮಾರಿ ರೋಗ, ನಂಜಾಣು ರೋಗ ಹಾಗೂ ಒಣ ಬೇರು ಕೊಳೆ ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ.

ಬಿತ್ತನೆ ಮಾಡುವ 2–3 ವಾರಗಳ ಮುಂಚಿತವಾಗಿ ಎಕರೆಗೆ 2.5– 3.0 ಟನ್ ಕೊಟ್ಟಿಗೆ ಗೊಬ್ಬರ/ ಕಾಂಪೋಸ್ಟ್ ಅನ್ನು ಮಣ್ಣಿನಲ್ಲಿ ಸೇರಿಸಬೇಕು. ಬಿತ್ತನೆ ಬೀಜವು ಒಂದು ಎಕರೆ ಪ್ರದೇಶಕ್ಕೆ 10 ಕೆ.ಜಿ. ಪ್ರಮಾಣದಲ್ಲಿ ರೈಜೋಬಿಯಂ ಜೀವಾಣುವಿನಿಂದ 20–25 ಗ್ರಾಂ. ಪ್ರತಿ ಕೆ.ಜಿ. ಬೀಜಕ್ಕೆ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಬಿತ್ತನೆ ಸಮಯದಲ್ಲೆ 43 ಕೆ.ಜಿ. ಡಿ.ಎ.ಪಿ. ಗೊಬ್ಬರ, 5 ಕೆ.ಜಿ. ಯೂರಿಯಾ ಹಾಗೂ 16 ಕೆ.ಜಿ. ಪೊಟ್ಯಾಷ್ ಗೊಬ್ಬರ ಪ್ರತಿ ಎಕರೆಗೆ ಒದಗಿಸಬೇಕು. ಅಲಸಂದೆ ಹೂವು ಬಿಡುವ ಹಂತದಲ್ಲಿ 10 ಗ್ರಾಂ. ಪಲ್ಸ್ ಮ್ಯಾಜಿಕ್ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿಕೊಳ್ಳಬೇಕು ಅಂದರೆ 200 ಲೀಟರ್ ನೀರಿನ ಬ್ಯಾರಾಲ್‌ಗೇ 2 ಕೆ.ಜಿ. ಪಲ್ಸ್ ಮ್ಯಾಜಿಕ್ ಮಿಶ್ರಣ ಮಾಡಿಕೊಂಡು ಒಂದು ಎಕರೆ ಅಲಸಂದೆ ಗಿಡಕ್ಕೆ ಸಿಂಪಡಿಸುವುದರಿಂದ ಒಳ್ಳೆ ಅಲಸಂದೆ ಇಳುವರಿಯನ್ನು ಪಡೆಯಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೇಲಿನವಲಗೇರಹಳ್ಳಿಯ ರೈತರಾದಂತಹ ರಂಗಸ್ವಾಮಿ, ಬಾನು ಪ್ರಸದ್, ಕುಮಾರ್, ನಿಖಿಲ್ ಹಾಗೂ ಇತರೆ ರೈತರು ಭಾಗವಹಿಸಿದ್ದರು.

## ತೊಗರಿಯಲ್ಲಿ ಅಧಿಕ ಇಳುವರಿಗಾಗಿ ಪಲ್ಸ್ ಮ್ಯಾಜಿಕ್



ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆ ತಾಲ್ಲೂಕುಗಳಲ್ಲಿ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಯಡಿ ತೊಗರಿಗೆ ಪಲ್ಸ್ ಮ್ಯಾಜಿಕ್ ಸಿಂಪರಣೆ ಪ್ರಾತ್ಯಕ್ಷಿಕೆಯನ್ನು ದಿನಾಂಕ 07/11/2025 ರಂದು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಯಾದ ಡಾ ದರ್ಶನ್ ತುಮಕೂರು ಜಿಲ್ಲೆಯಲ್ಲಿ ತೊಗರಿ ಪ್ರಮುಖ ದ್ವಿದಳ ಧಾನ್ಯ ಬೆಳೆಗಳಲ್ಲಿ ಒಂದಾಗಿದ್ದು, ಪಾವಗಡ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ ತಾಲ್ಲೂಕುಗಳು ತೊಗರಿ ಬೆಳೆಯಲ್ಲಿ ಮುಂಚೂಣಿಯಲ್ಲಿದೆ. ಪ್ರಸ್ತುತ 10,588 ಹೆಕ್ಟೇರ್ ಪ್ರದೇಶದಲ್ಲಿರುವ ತೊಗರಿ ಉತ್ಪಾದಕತೆಯಲ್ಲಿ ರಾಜ್ಯದ ಸರಾಸರಿಗಿಂತಲೂ ಕಡಿಮೆಯಿದ್ದು, ವಿಜ್ಞಾನಿಗಳ ಅಧ್ಯಯನದ ಪ್ರಕಾರ ತೊಗರಿ ಬೆಳೆಯಲ್ಲಿ ಇಳುವರಿ ಕುಸಿತಕ್ಕೆ ಮುಖ್ಯ ಕಾರಣ ಹೂವು ಮತ್ತು ಕಾಯಿ ಉದುರುವಿಕೆಯ ಹೆಚ್ಚು ಪ್ರಮಾಣ ಎಂದು ಹೇಳಲಾಗುತ್ತಿದೆ. ಸಾಮಾನ್ಯವಾಗಿ ತೊಗರಿ ಸಸಿಯಲ್ಲಿ 70 – 90% ಹೂವುಗಳು ಉದುರಿ ಹೊಗುತ್ತಿವೆ. ಈ ರೀತಿ ಹೆಚ್ಚಿನ ಹೂವು ಉದುರುವಿಕೆಯಿಂದ ಸಸಿಗಳು ಕಡಿಮೆ ಕಾಯಿಯ ಹಿಡಿತವನ್ನು ಪಡೆಯುತ್ತವೆ. ಇದರಿಂದ ಸಿಂಕ್ ಸಾಮರ್ಥ್ಯ ಅಂದರೆ ಸಸಿಯು ಹೂವಿನಿಂದ ಕಾಯಿ ಹಾಗೂ ಕಾಯಿಯಿಂದ ಧಾನ್ಯವನ್ನು ತುಂಬಿಕೊಳ್ಳುವ ಸಾಮಥ್ಯ ಕಡಿಮೆಯಾಗುತ್ತದೆ ಎಂದರು. ಮುಂದುವರೆದು ಇದನ್ನು ತಡೆಗಟ್ಟಲು ಪಲ್ಸ್ ಮ್ಯಾಜಿಕ್ ಸಿಂಪರಣೆ ಆದಾರಿತ ತಂತ್ರಜ್ಞಾನವನ್ನು ಪರಿಚಯಿಸುತ್ತಿದ್ದು, ಇದರ ಸಿಂಪರಣೆಯಿಂದ ಹೂವು ಮತ್ತು ಕಾಯಿ ಉದುರುವಿಕೆಯನ್ನು ತಡೆಗಟ್ಟಬಹುದಾಗಿದೆ, ಈ ಪಲ್ಸ್ ಮ್ಯಾಜಿಕ್ ಒಂದು ಸಸ್ಯೋತ್ಪಾದಕ ಬಯೋಸ್ಟಿಮುಲೆಂಟ್ (**Bio Stimulant**) ಅಂದರೆ ಸಸ್ಯದ ಬೆಳವಣಿಗೆಗೆ ಉತ್ತೇಜನ ನೀಡುವ ಉತ್ಪನ್ನವಾಗಿದ್ದು, ಇದರಲ್ಲಿ ಅಗತ್ಯ ಪೋಷಕಾಂಶಗಳು, ಹಾರ್ಮೋನ್‌ಗಳು ಹಾಗೂ ಸೂಕ್ಷ್ಮಾಂಶಗಳು ಒಳಗೊಂಡಿವೆ. ಇದನ್ನು ಪ್ರತಿ ಲೀಟರ್ ನೀರಿಗೆ 8 – 10 ಗ್ರಾಂ ಪುಡಿ ಹಾಗೂ 0.5 ಮಿ.ಲೀ. ದ್ರಾವಣವನ್ನು ಬೆರೆಸಿ ಹೂ ಬಿಡುವ ಹಂತದಲ್ಲಿ ಹಾಗೂ ಕಾಯಿ ಕಟ್ಟುವ ಹಂತದಲ್ಲಿ ಸಿಂಪಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಗುಚ್ಚ ಮುಂಚೂಣಿ ಪ್ರಾತ್ಯಕ್ಷಿಕೆಯಡಿ 200 ರೈತ ಫಲಾನುಭವಿಗಳಿಗೆ ಪಲ್ಸ್ ಮ್ಯಾಜಿಕ್ ಉತ್ಪನ್ನವನ್ನು ವಿತರಿಸಲಾಯಿತು. ಹಾಗೂ ಸಿಂಪರಣೆಯ ವಿಧಾನವನ್ನು ಮಾಡಿ ಕಲಿ ತತ್ವದಲ್ಲಿ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡಲಾಯಿತು.

## ಕೆ.ವಿ.ಕೆ.ಯಿಂದ ಸಾಮೆ ಬೆಳೆಯಾದ ಜಿ.ಪಿ.ಯು.ಎಲ್–6 ತಳಿಯ ಕ್ಷೇತ್ರೋತ್ಸವ



ಐ.ಸಿ.ಎ.ಆರ್ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ತುರುವೇಕೆರೆ ತಾಲ್ಲೂಕಿನ ಗೋಣಿತುಮಕೂರಿನಲ್ಲಿ ಸಾಮೆ ಬೆಳೆಯಾದ ಜಿ.ಪಿ.ಯು.ಎಲ್–6 ತಳಿಯ ಮುಂಚೂಣಿ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವವನ್ನು ದಿನಾಂಕ 18/11/2025 ರಂದು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಕು. ಗಾನವಿ ಗೃಹ ವಿಜ್ಞಾನಿ ಸಾಮೆ ತಳಿಯ ವಿಶೇಷತೆಯನ್ನು ವಿವರಿಸಿದರು. ಈ ತಳಿಯು ದಟ್ಟವಾದ ಮತ್ತು ಆರ್ಕಿಡ್ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಕಂದು ಬಣ್ಣದಿಂದ ಕೂಡಿದೆ. ಈ ತಳಿಯನ್ನು ಮುಂಗಾರು ಮತ್ತು ಬೇಸಿಗೆ ಎರಡೂ ಕಾಲಗಳಲ್ಲಿ ಬೆಳೆಯಬಹುದು. ಈ ತಳಿಯು ಎಲೆ ಅಂಗಮಾರಿ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಮುಂದುವರೆದು ಸಾಮೆ ಅತ್ಯಂತ ಪೌಷ್ಟಿಕ ಧಾನ್ಯವಾಗಿದ್ದು ನಾರು, ಕಬ್ಬಿಣ, ಕ್ಯಾಲ್ಸಿಯಂ ಮತ್ತು ಮ್ಯಾಗ್ನೀಷಿಯಂನ್ನು ಸಮೃದ್ಧಿವಾಗಿ ಹೊಂದಿದೆ. ಈ ಪೋಷಕಾಂಶಗಳು ದೇಹಕ್ಕೆ ಅಗತ್ಯವಾದ ಶಕ್ತಿ, ಎಲುಬುಗಳ ಬಲ, ರಕ್ತಕಣಗಳ ನಿರ್ಮಾಣ ಮತ್ತು ಜೀರ್ಣಶಕ್ತಿಯ ಸುಧಾರಣೆಗೆ ನೆರವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮೌಲ್ಯವರ್ಧಿತ ಉತ್ಪನ್ನಗಳ ರೂಪದಲ್ಲಿ ಹೆಚ್ಚಿನ ಬೇಡಿಕೆಯನ್ನು ಪಡೆದುಕೊಂಡಿದೆ. ಕಡಿಮೆ ಗ್ಲೈಸೇಮಿಕ್ ಇಂಡೆಕ್ಸ್ ಹೊಂದಿರುವುದರಿಂದ ಎಲ್ಲಾ ವಯಸ್ಸಿನ ಜನರಿಗೆ ಆರೋಗ್ಯಕರ ಆಯ್ಕೆಯಾಗಿದೆ. ಸಾಮಾನ್ಯವಾಗಿ ನೇರವಾಗಿ ಉಪಯೋಗಿಸುವ ಬದಲು ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವ ಮೂಲಕ ಇದರ ಪೌಷ್ಟಿಕ ಮೌಲ್ಯ, ಶೇಖರಣಾ ಅವಧಿ ಹಾಗೂ ಮಾರುಕಟ್ಟೆ ಮೌಲ್ಯವನ್ನು ಹೆಚ್ಚಿಸಬಹುದು ಎಂದು ಮಾಹಿತಿ ನೀಡಿದರು.

ಕೃಷಿ ವಿಸ್ತರಣೆ ವಿಜ್ಞಾನಿಯಾದ ಡಾ ದರ್ಶನ್‌ರವರು ಮಾತನಾಡಿ ಈ ಒಂದು ಸಾಮೆ ತಳಿಯು ಬರಸಹಿಷ್ಣತ ತಳಿಯಾಗಿದ್ದು ಎಕರೆಗೆ 3 – 4 ಕೆ.ಜಿ. ಬಿತ್ತನೆ ಬೀಜದ ಅವಶ್ಯಕತೆಯಿದ್ದು, ವೈಜ್ಞಾನಿಕ ಬೇಸಾಯ ಪದ್ಧತಿ ಪಾಲನೆಯಿಂದ ಪ್ರತಿ ಎಕರೆಗೆ 5– 5.5 ಕ್ವಿಂ. ಇಳುವರಿಯನ್ನು ಪಡೆಯಬಹುದು.

ನಮ್ಮ ಕೃಷಿ ವಿಜ್ಞಾನ ಕೇಂದ್ರದಲ್ಲಿಯೇ ಕಿರುಧಾನ್ಯಗಳ ಸಂಸ್ಕರಣೆ ಘಟಕವಿದ್ದು, 1 ಕೆ.ಜಿ. ಸಾಮೆ ಬೀಜವನ್ನು ಅಕ್ಕಿಯಾಗಿ ಪರಿವರ್ತಿಸಲು ಸಂಸ್ಕರಣ ಶುಲ್ಕ ರೂ. 5 ಗಳಾಗಿದ್ದು, ರೈತರು ಇದರ ಉಪಯೋಗವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ರಾಮಚಂದ್ರ, ರಮೇಶ್ ಹಾಗೂ ಸಹಭಾಗಿತ್ವ ರೈತರಾದ ಸುಧಾಮಣಿ, ಉದಯ್ ಸೇರಿದಂತೆ 25ಕ್ಕೂ ಅಧಿಕ ರೈತರು ನೋಡಿ ತಿಳಿ ಎಂಬ ತತ್ವದಡಿಯಲ್ಲಿ ಈ ಕ್ಷೇತ್ರೋತ್ಸವದಲ್ಲಿ ಪಾಲ್ಗೊಂಡಿದ್ದರು.

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ರೈತರ ಸಂಖ್ಯೆ |
|---|---|---|---|
| 1 | 4ನೇ ವರ್ಷದ ಬಿ.ಎಸ್ಸಿ ಕೃಷಿ ವಿದ್ಯಾರ್ಥಿಗಳಿಗೆ ಕೆ.ವಿ.ಕೆ.ಯ ಬಗ್ಗೆ ಶೈಕ್ಷಣಿಕ ತರಬೇತಿ | 13/10/2025 ರಿಂದ 18/10/2025 | 31 |
| 2 | ತಿಪಟೂರಿನ ಕಲ್ಪತರು ಶಾಲೆಯ ವಿದ್ಯಾರ್ಥಿಗಳ ಕೆ.ವಿ.ಕೆ.ಯ ಪರಿಚಯ ಭೇಟಿ | 15/10/2025 | 150 |
| 3 | 4ನೇ ವರ್ಷದ ಬಿ.ಎಸ್ಸಿ ಕೃಷಿ ವಿದ್ಯಾರ್ಥಿನಿಯರಿಗೆ ಕೆ.ವಿ.ಕೆ.ಯ ಬಗ್ಗೆ ಶೈಕ್ಷಣಿಕ ತರಬೇತಿ | 21/10//2025 ರಿಂದ 28/10/2025 | 31 |
| 4 | ಜಾಗರೂಕತೆ ಅರಿವು ಸಪ್ತಾಹ | 27/10//2025 | 37 |
| 5 | ಕೃಷಿ ವೋಲ್ಟಾಯಿಕ್ಸ್ ಮತ್ತು ಬೆಳೆ ಉತ್ಪಾದನೆಯಲ್ಲಿ ಅದರ ಪ್ರಾಮುಖ್ಯತೆಯ ಕುರಿತು ಕಾರ್ಯಾಗಾರ | 28/11/2025 | 100 |
| 6 | ಸಮಗ್ರ ಮೀನು ಸಾಕಾಣಿಕೆ | 06/11/2025 ರಿಂದ 07/11/2025 | 50 |
| 7 | ಹುಣಸೆ ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳು | 08/11/2025 | 43 |
| 8 | ಘನತ್ಯಾಜ್ಯ ನಿರ್ವಹಣೆ | 11/12/2025 | 105 |

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 9 | ಸಾವಯವ ಕೃಷಿ | 27/12/2025 | 45 |
| 10 | ಬೇಸಿಗೆ ಬೆಳೆಗಳ ಉತ್ಪಾದನಾ ತಂತ್ರಜ್ಞಾನಗಳ ಕುರಿತು ರೈತ ವಿಜ್ಞಾನಿಗಳ ಸಂವಾದ | 09/12/2025 | 35 |
| 11 | ಕೃಷಿಯಲ್ಲಿ ಪೋಷಕಾಂಶಗಳ ಮಹತ್ವ | 12/12/2025 | 35 |

## ಹೊರಾವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ರೈತರ ಸಂಖ್ಯೆ |
|---|---|---|---|---|
| 1 | ಅವರೆ ತಳಿ ಎಚ್.ಎ. – 5ಗೆ ಪಲ್ಸ್ ಮ್ಯಾಜಿಕ್ ಸಿಂಪರಣೆಯ ತರಬೇತಿ | ಕರೀಕೆರೆ, ತಿಪಟೂರು ತಾ. | 22/11/2025 | 10 |
| 2 | ತೊಗರಿ ತಳಿ ಬಿ.ಆರ್.ಜಿ. – 4 ಮತ್ತು 5ಗೆ ಪಲ್ಸ್ ಮ್ಯಾಜಿಕ್ ಸಿಂಪರಣೆಯ ತರಬೇತಿ | ಕೈತಿಮ್ಮನಹಳ್ಳಿ, ಮಾದಿಹಳ್ಳಿ, ತಿಪಟೂರು ತಾ. | 25/11/2025 | 40 |
| 3 | ದ್ವಿದಳ ಧಾನ್ಯಗಳ ಸಮಗ್ರ ಬೆಳೆ ನಿರ್ವಹಣೆ | ಕೆಂಗಲಾಪುರ, ತಿಪಟೂರು ತಾ. | 07/11/2025 | 55 |
| 4 | ತೊಗರಿ ಉತ್ಪಾದನೆ ಹೆಚ್ಚಳಕ್ಕಾಗಿ ಪಲ್ಸ್ ಮ್ಯಾಜಿಕ್ ತಂತ್ರಜ್ಞಾನ | ಹೆಬಕನಹಳ್ಳಿ, ತುರುವೆಕೆರೆ ತಾ. | 18/11/2025 | 42 |
| 5 | ರೈತರ ದಿನ | ಗುಬ್ಬಿ, ಗುಬ್ಬಿ ತಾ. | 23/12/2025 | 205 |
| 6 | ತೊಗರಿಯಲ್ಲಿ ಸಮಗ್ರ ಕೀಟ ನಿರ್ವಹಣಾ ಪದ್ಧತಿಗಳು | ತುರುವೇಕೆರೆ, ತುರುವೇಕೆರೆ ತಾ. | 27/12/2025 | 45 |

## ಸಹಭಾಗಿತ್ವದಲ್ಲಿ ಕೈಗೊಂಡ ತರಬೇತಿಗಳು

| ಕ್ರ.ಸಂ. | ವಿಷಯ | ಸಹಭಾಗಿತ್ವದ ಸಂಸ್ಥೆ | ದಿನಾಂಕ | ರೈತರ ಸಂಖ್ಯೆ |
|---|---|---|---|---|
| 1 | ಕೃಷಿ ವೋಲ್ಟಾಯಿಕ್ಸ್ ಮತ್ತು ಬೆಳೆ ಉತ್ಪಾದನೆಯಲ್ಲಿ ಅದರ ಪ್ರಾಮುಖ್ಯತೆಯ ಕುರಿತು ಕಾರ್ಯಾಗಾರ | ವಿಜ್ಞಾನ, ತಂತ್ರಜ್ಞಾನ ಮತ್ತು ನೀತಿ ಅಧ್ಯಯನ ಕೇಂದ್ರ, ಬೆಂಗಳೂರು | 28/11/2025 | 100 |
| 2 | ಒಂದು ವರ್ಷದ ಕೃಷಿ ಡಿಪ್ಲೊಮಾ | ದೂರ ಶಿಕ್ಷಣ ಘಟಕ, ಕೃ.ವಿ.ವಿ., ಜಿ.ಕೆ.ವಿ.ಕೆ, ಬೆಂಗಳೂರು | 17/11/2025 ರಿಂದ 22/11/2025 | 32 |

## ಪ್ರಮುಖ ದಿನಗಳು / ಕಾರ್ಯಕ್ರಮಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ರೈತರ ಸಂಖ್ಯೆ |
|---|---|---|---|---|
| 1 | ಸಸ್ಯ ಸಂತೆ – 2025: ರೈತರ ಸಮೃದ್ಧಿಯ ಕಡೆಗೆ ಒಂದು ಹಸಿರು ಹೆಜ್ಜೆ | ಕೆ.ವಿ.ಕೆ., ಕೊನೇಹಳ್ಳಿ | 28/10/2025 ರಿಂದ 29/10/2025 | 7000 |
| 2 | ಪ್ರಧಾನ ಮಂತ್ರಿ ಧನ – ಧಾನ್ಯ ಕೃಷಿ ಯೋಜನೆ ನೇರ ಪ್ರಸಾರ | ಕೆ.ವಿ.ಕೆ., ಕೊನೇಹಳ್ಳಿ | 11/10/2025 | 1453 |
| 3 | ವಿಶ್ವ ಆಹಾರ ದಿನಾಚರಣೆ 2025 | ಕೆ.ವಿ.ಕೆ., ಕೊನೇಹಳ್ಳಿ | 16/10/2025 | 102 |
| 4 | ದೇಸಿ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ | ಕೆ.ವಿ.ಕೆ., ಕೊನೇಹಳ್ಳಿ | 26/11/2025 | 40 |
| 5 | 21 ನೇ ಕಂತಿನ ಪಿಎಂ ಕಿಸಾನ್ ಕಾರ್ಯಕ್ರಮದ ನೇರ ಪ್ರಸಾರ | ಕೆ.ವಿ.ಕೆ., ಕೊನೇಹಳ್ಳಿ | 19/11/2025 | 60 |
| 6 | ಭಗವಾನ್ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 15/11/2025 | 45 |
| 7 | ಸಂವಿಧಾನ ಜಾಗೃತಿ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 26/11/2025 | 38 |
| 8 | ರೈತರ ದಿನ | ಗುಬ್ಬಿ, ಗುಬ್ಬಿ ತಾ. | 23/12/2025 | 80 |
| 9 | ವಿಶ್ವ ಮಣ್ಣಿನ ದಿನ – 2025 | ಕೆ.ವಿ.ಕೆ., ಕೊನೇಹಳ್ಳಿ | 05/12/2025 | 65 |
| 10 | ಜಿ – ರಾಮ್ – ಜಿ ಆಚರಣೆ | ಕೆ.ವಿ.ಕೆ., ಕೊನೇಹಳ್ಳಿ | 23/12/2025 | 45 |

## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ. ಸಂ. | ದಿನಾಂಕ | ಸ್ಥಳ | ವಿಷಯ | ರೈತರ ಸಂಖ್ಯೆ |
|---|---|---|---|---|
| 1 | 06/10/2025 | ಚೌಳಕಟ್ಟೆ, ಚಿ.ನಾ. ಹಳ್ಳಿ ತಾಲ್ಲೂಕು | ಕೆಚ್ಚಲುಬಾಹು ಮತ್ತು ಜ್ವರ ಭಾದಿತ ಹಸು | 9 |
| 2 | 23/10/2025 | ಹಟ್ನ, ಚಿ.ನಾ. ಹಳ್ಳಿ ತಾಲ್ಲೂಕು | ಜ್ವರ ಮತ್ತು ಪಾದ ಕೊಳೆ ರೋಗ ಭಾದಿತ ಹಸು | 8 |
| 3 | 11/11/2025 | ತಿಪಟೂರು, ತಿಪಟೂರು ತಾಲ್ಲೂಕು | ಅಡಿಕೆ ತೋಟಕ್ಕೆ ರೋಗನಿರ್ಣಯಕ ಕ್ಷೇತ್ರ ಭೇಟಿ | 10 |
| 4 | 20/11/2025 | ಮೈಲನಹಳ್ಳಿ, ತಿಪಟೂರು ತಾಲ್ಲೂಕು | ಪನಾಮ ರೋಗ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | 12 |
| 5 | 07/12/2025 | ಗುಬ್ಬಿ, ಗುಬ್ಬಿ ತಾಲ್ಲೂಕು | ಸಿಗಟೋಕ ರೋಗ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | 10 |
| 6 | 15/12/2025 | ನಾಗಲಾಪುರ, ಚಿ.ನಾ. ಹಳ್ಳಿ ತಾಲ್ಲೂಕು | ಕೆಚ್ಚಲುಬಾಹು ಭಾದಿತ ಹಸು ನಿರ್ವಹಣೆ | 08 |

## ಪದ್ಧತಿ ಪ್ರಾತ್ಯಕ್ಷಿಕೆ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ರೈತರ ಸಂಖ್ಯೆ |
|---|---|---|---|---|
| 1 | 13/10/2025 | ಬೀಜಾಮೃತ ತಯಾರಿಕೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ. ಕೊನೇಹಳ್ಳಿ | 9 |
| 2 | 18/10/2025 | ಜೀಜಾಮೃತ ತಯಾರಿಕೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ. ಕೊನೇಹಳ್ಳಿ | 10 |
| 3 | 07/11/2025 | ತೊಗರಿಗೆ ಪಲ್ಸ್ ಮ್ಯಾಜಿಕ್ ಸಿಂಪರಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೆಂಗಲಾಪುರ, ತಿಪಟೂರು ತಾ. | 29 |
| 4 | 22/11/2025 | ಅವರೆ ಬೆಳೆಯ ತಳಿ ಎಚ್.ಎ. – 5ಗೆ ಪಲ್ಸ್ ಮ್ಯಾಜಿಕ್ ಸಿಂಪರಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಕರೀಕೆರೆ, ತಿಪಟೂರು ತಾ. | 10 |
| 5 | 25/11/2025 | ತೊಗರಿ ತಳಿ ಬಿ.ಆರ್.ಜಿ. – 4 ಮತ್ತು 5ಗೆ ಪಲ್ಸ್ ಮ್ಯಾಜಿಕ್ ಸಿಂಪರಣೆಯ ಪದ್ಧತಿ ಪ್ರಾತ್ಯಕ್ಷಿಕೆ | ಕೈತಿಮ್ಮನಹಳ್ಳಿ, ಮಾದಿಹಳ್ಳಿ, ತಿಪಟೂರು ತಾ. | 40 |
| 6 | 05/12/2025 | ರಾಗಿಯ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ. ಕೊನೇಹಳ್ಳಿ | 45 |
| 7 | 27/12/2025 | ಸಾಮೆಯ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಗೋಣಿ ತುಮಕೂರು, ತುರುವೇಕೆರೆ ತಾ. | 65 |
| 8 | 12/12/2025 | ರಾಗಿಯ ಮೌಲ್ಯವರ್ಧಿತ ಉತ್ಪನ್ನಗಳ ಪದ್ಧತಿ ಪ್ರಾತ್ಯಕ್ಷಿಕೆ | ಕೆ.ವಿ.ಕೆ. ಕೊನೇಹಳ್ಳಿ | 35 |

## ಕ್ಷೇತ್ರೋತ್ಸವ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ರೈತರ ಸಂಖ್ಯೆ |
|---|---|---|---|---|
| 1 | 07/11/2025 | ಅಲಸಂಧೆ ತಳಿ ಕೆ.ಬಿ.ಸಿ – 12ಯ ಕ್ಷೇತ್ರೋತ್ಸವ | ಎಂ.ವಿ. ಹಳ್ಳಿ, ತಿಪಟೂರು ತಾ. | 35 |
| 2 | 18/11/2025 | ಸಾಮೆ ಬೆಳೆಯಾದ ಜಿ.ಪಿ.ಯು.ಎಲ್–6 ತಳಿಯ ಕ್ಷೇತ್ರೋತ್ಸವ | ಗೋಣಿ ತುಮಕೂರು, ತುರುವೇಕೆರೆ ತಾ. | 42 |
| 3 | 26/11/2025 | ಸೊರಗು ರೋಗ ನಿರೋಧಕ ಕಸಿ ಬದನೆ ತಂತ್ರಜ್ಞಾನದ ಕ್ಷೇತ್ರೋತ್ಸವ | ಬಿದರೇಗುಡಿ, ತಿಪಟೂರು ತಾ. | 59 |
| 4 | 21/11/2025 | ಗುಚ್ಛ ಮುಂಚೂಣಿ ಪ್ರಾತ್ಯಕ್ಷಿಕೆಯಡಿ ಹರಳು ತಳಿ ಐ.ಸಿ.ಹೆಚ್. – 5ಯ ಕ್ಷೇತ್ರೋತ್ಸವ | ರಂಗನಕೆರೆ, ತಿಪಟೂರು ತಾ. | 49 |
| 5 | 10/12/2025 | ತಡವಾದ ಮುಂಗಾರಿಗೆ ಸೂಕ್ತವಿರುವಂತಹ ರಾಗಿ ತಳಿ ಎಂ.ಎಲ್–322ಯ ಕ್ಷೇತ್ರೋತ್ಸವ | ಬುಳ್ಳೇನಹಳ್ಳಿ, ಚಿಕ್ಕನಾಯಕನಹಳ್ಳಿ ತಾ. | 45 |
| 6 | 17/12/2025 | ರಾಗಿ ತಳಿ ಜಿ.ಪಿ.ಯು–66ಯ ಕ್ಷೇತ್ರೋತ್ಸವ | ಚಟ್ಟನಹಳ್ಳಿ, ತಿಪಟೂರು ತಾ. | 52 |
| 7 | 23/12/2025 | ತೊಗರಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ | ಮಾದಿಹಳ್ಳಿ, ತಿಪಟೂರು ತಾ. | 49 |


| | |
|---|---|
| ಪ್ರಧಾನ ಸಂಪಾದಕರು : | ಡಾ. ಎಂ. ಹೆಚ್. ಶಂಕರ |
| ಸಹ ಸಂಪಾದಕರು : | ಡಾ. ಹೆಚ್.ಬಿ. ಶಿವಪ್ಪ ನಾಯಕ, ಶ್ರೀ. ಮನೋಜ್ ಹೆಚ್., ಡಾ. ತಸ್ಮಿಯಾ ಕೌಸರ್ ಡಾ. ದರ್ಶನ್ ಎಂ.ಈ., ಡಾ. ಕೀರ್ತಿಶಂಕರ್ ಕೆ, ಕು. ಗಾನವಿ ಬಿ.ಆರ್. |
| ಸಹಾಯಕ ಸಂಪಾದಕರು : | ಡಾ. ಸತೀಶ್. ಹೆಚ್.ಎಸ್, ಕು. ಶಮಾ ನಾಜ್ |
| ಪುಟ ವಿನ್ಯಾಸ ಮತ್ತು ಬೆರಳಚ್ಚುಗಾರ : | ಪ್ರದೀಪ್ ಕುಮಾರ್ ಹೆಚ್. |

**ಪ್ರಕಾಶಕರು:**
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು, ತುಮಕೂರು ಜಿಲ್ಲೆ

ವೆಬ್‌ಸೈಟ್ http://kvktumakuru.org/img/nl/11.pdf